# ಮಾಂತ್ರಿಕ ವಾಸ್ತವವಾದಿ ಜಪಾನಿ ಕತೆಗಾರ ಹರುಕಿ ಮುರಕಮಿ

## ಒಂದು ಸಾಹಿತ್ಯಿಕ ಸಂದರ್ಶನ

ಇಂಗ್ಲಿಷ್ ಮೂಲ: **ಜಾನ್ ರೇ**
ಕನ್ನಡಕ್ಕೆ: **ಹೇಮಾ ಎಸ್.**
ಕಲೆ: ಗುರು ನಾವಳ್ಳಿ

ಆಕಾಶದಿಂದ ಮೀನಿನ ಮಳೆ ಸುರಿಯುವ, ಕಿಡ್ನಿ ಗಾತ್ರದ ಕಲ್ಲೊಂದು ಇಟ್ಟ ಜಾಗದಲ್ಲಿರದೆ ದಿನವೂ ಜಾಗ ಬದಲಿಸುವ, ಬೀಗ ಕೂಡ ಕಳಚದ ಪಂಜರದಿಂದ ಆನೆಯೊಂದು ಇದ್ದಕ್ಕಿದ್ದಂತೆ ಮಾಯವಾಗಿಬಿಡುವ, ಕಪ್ಪೆಯೊಂದು ಟೋಕಿಯೊ ನಾಶವಾಗುವ ಕುರಿತು ಹೇಳುವ – ಹೀಗೆ ಮೇಲ್ನೋಟಕ್ಕೆ ವಿಚಿತ್ರ, ತಮಾಷೆ, ಪತ್ತೆದಾರಿ ಅಂಶಗಳನ್ನು ಹೊಂದಿರುವ ಕತೆಗಳ ಮೂಲಕ ಮನುಷ್ಯನ ಸುಪ್ತಪ್ರಜ್ಞೆ, ಭಾವನೆಗಳು, ಒಂಟಿತನಗಳಿಗೆ ಮನಸಿನಾಳಕ್ಕೆ ಪಾತಾಳಗರಡಿ ಹಾಕಿ ಕೂರುವ ಜಪಾನಿ ಲೇಖಕ ಹರುಕಿ ಮುರಕಮಿ. ಜನಪ್ರಿಯ ಸಂಸ್ಕೃತಿ ಹಾಗೂ ಕ್ಲಾಸಿಕ್ ಸಾಹಿತ್ಯ ಎರಡನ್ನೂ ಮಿಳಿತಗೊಳಿಸಿಕೊಂಡ ಆಕರ್ಷಕ ಶೈಲಿಯ ಲೇಖಕ. “ಬೇಸ್‌ಬಾಲ್ ಅಂದರೆ ನನಗಿಷ್ಟ. ಅದೊಂದು ಬಹಳ ಬೋರಿಂಗ್ ಆಟ. ಹೀಗೆ ಒಮ್ಮೆ ಸ್ಟೇಡಿಯಂನಲ್ಲಿ ಆಟವನ್ನು ನೋಡುತ್ತಿದ್ದಾಗ ಆಟಗಾರನ ಬ್ಯಾಟಿನಿಂದ ಚಿಮ್ಮಿದ ಬಾಲು ಗಾಳಿಯಲ್ಲಿ ತೇಲುತ್ತಿದ್ದನ್ನು ನೋಡುತ್ತಿದ್ದ ಹಾಗೆ ನಾನು ಕಾದಂಬರಿ ಬರೆಯಬಲ್ಲೆ ಅನ್ನಿಸಿತು. **‘Hear the Wind Sing’** ಕಾದಂಬರಿಯನ್ನು ಶುರುಮಾಡಿದ್ದು ಹೀಗೆ” ಎಂದು ತಾನು ಲೇಖಕನಾದ ಕ್ಷಣದ ಬಗ್ಗೆ ಹೇಳುತ್ತಾನೆ. ಸ್ಪ್ಯಾನಿಶ್ ಲೇಖಕ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್‌ನನ್ನು ಇಷ್ಟಪಡುವ ಮುರಕಮಿಯ ಕತೆಗಳಲ್ಲಿ ಕೂಡ ಅವನ ಮೆಚ್ಚಿನ ಲೇಖಕನಂತೆಯೇ ಮಾಂತ್ರಿಕ ವಾಸ್ತವವಾದವನ್ನು ಕಾಣಬಹುದು. “ನನ್ನ ಕತೆಗಳು ನನ್ನ ಪಾಲಿಗೆ ವಾಸ್ತವ ಅಷ್ಟೇ. ನನ್ನ ಶೈಲಿ ನನಗೆ ಕನ್ನಡಕದಂತೆ. ಅದರ ಮೂಲಕ ಕಂಡ ಲೋಕವನ್ನು ಕಂಡಂತೆ ಬರೆಯುತ್ತೇನೆ” ಎಂದು ಹೇಳುತ್ತಾನೆ. ಓದಲು ಕೂರಲು ಸಮಯದ ಅಭಾವವಿರುವ ಈ ಕಾಲದಲ್ಲಿ ಬರವಣಿಗೆ ವಿಡಿಯೊಗೇಮ್‌ನಂತೆ ಸೆಳೆಯುವಂತಿರಬೇಕು ಎನ್ನುವುದು ಈತನ ನಿಲುವು.

ಜಪಾನಿನ ಕ್ಯೊಟೊದಲ್ಲಿ 1949ರಲ್ಲಿ ಜನಿಸಿದ ಮುರಕಮಿ ಥಿಯೇಟರ್ ಆರ್ಟ್ಸ್‌ನಲ್ಲಿ ವಸೆಡ ಯೂನಿವರ್ಸಿಟಿಯಿಂದ ಪದವಿ ಗಳಿಸಿದ್ದಾನೆ. 1974ರಲ್ಲಿ ಪೀಟರ್ ಕ್ಯಾಟ್ ಎನ್ನುವ ಜಾಝ್